ಕೋಲಾರ ಡಿಸ್ಟ್ರಿಕ್ಟು.

ತಾರೀಖು 8ನೇ ಮೇ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಚಿಕ್ಕಬಳ್ಳಾಪುರದ ಟರ್ವನಲ್ಲಿರುವ ಹಳೇ ತಾಲ್ಲೂಕು ಕಛೇರಿ ಕಟ್ಟಡ ನಿವೇಶನ ಸಹಿತ ಸ್ಯ 1884ನೇ ಅನವಿ ಜೂ ತಾರೀಖು 2ನೇ ದಿವಿ 11 ಘಂಟೆಗೆ ಆ ತಾಲ್ಲೂಕು ಅಮಲ್ದಾರ್ರವರ ರೂಬರೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಯಿಚ್ಛೈವುಳ್ಳವರು ಆ ಕಾಲಕ್ಕೆ ಸರಿಯಾಗಿ ಹಾಜರಾಗಿ ಧಾರಾಳವಾಗಿ ಸವಾಲ್ ಮಾಡಬಹುದು, ಹರಾಜು ಕೈದಾದ ಮೇಲೆ ಬರುವ ಸವಾಲ್ ಮಂಜೂರ್ ಮಾಡಲ್ಪಡುವದಿಲ್ಲ.

2. ಈ ಹರಾಜು ದೀವಾ ಸಾಹೆಬರವರ ಮಂಜೂರಾತಿಗೆ ವಳಪಟ್ಟಿರುತ್ತೆ.

3. ಹರಾಜು ಕೈದಾದ ವಡನೆ ಚಡ ಸವಾಲ್ದಾರನು ಅವನ ಸವಾಲ್ ಮೊಬಲಗು ಪೈಕೀ 4ರಲ್ಲಿ ವಂದು ಹಿಸ್ಸೆ ತೇವಣಿ ಯಿಡಬೇಕು, ಯಿಡುವದಕ್ಕೆ ತಪ್ಪಿದರೆ ದುಸರಾ ಹರಾಜು ಹಾಕಿಸಲ್ಪಡುತ್ತೆ, ಕಮ್ಮಿ ಬಿದ್ದ ಮೊಬಲಗು ಚಡ ಸವಾಲ್ದಾರನ ಜಿಂದಗಿ ಯಿಂದ ರೆವಿನ್ಯೂ ಕಂದಾಯದ ಬಾಕೀಯಂತೆ ವಸೂಲ್ಮಾಡಲ್ಪಡುವದು, ಆ ಹರಾಜಿನಲ್ಲಿ ಜಾಸ್ತೀ ಹುಟ್ಟಿದರೆ ಚಡ ಸವಾಲ್ದಾರನಿಗೆ ಜಾಸ್ತೀ ಮೊಬಲಗ್ಯೆ ಹಕ್ಕು ಯಿಲ್ಲಾ, ಹರಾಜು ದೀವಾ ಸಾಹೆಬರವರಿಂದ ಮಂಜೂರ್ ಮಾಡಲ್ಪಟ್ಟ ಸಂಗತಿಯನ್ನು ಬರವಣಿಗೆ ಮೂಲಕವಾಗಿ ಚಡ ಸವಾಲ್ದಾರನಿಗೆ ತಿಳಿಸಿದ 3 ದಿವಸಗಳ ವಳಗಾಗಿ ಅವನು ಬಾಕೀ ಮೊಬಲಗನ್ನು ಮತ್ತು ಚಡ ಸವಾಲ್ ಮೊಬಲಗ್ಯೆ ರೂಪಾಯಿ 1ಕ್ಕೆ 1ಆಣೆ ಮೇರಿಗೆ ಲೋಕಲ್ ಸೆಸ್ ಸಹ ಪಾವತೀ ಮಾಡಿ ಕಟ್ಟಡ ಸ್ವಾಧೀನಕ್ಕೆ ಪಡಿಯಬೇಕು, ಬಾಕೀ ಹಣ ಲೊಕಲ್ ಸೆಸ್ ಸಹಾ ಕೊಡುವದಕ್ಕೆ ತಪ್ಪಿದರೆ ತೇವಣಿ ಮೊಬಲಗನ್ನ ಸರಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಪುನಃ ಹರಾಜು ಹಾಕಿಸಿ ಲುಕಸಾರ್ ಮೊಬಲಗನ್ನ ತಪ್ಪಿದ ಚಡ ಸವಾಲ್ದಾರನಿಂದ ರೆವಿನ್ಯು ಕಂದಾಯದಂತೆ ವಸೂಲ್ಮಾಡಲಾಗೀತು.

ಜೆ. ರಘುನಾಥರಾವ್,
ಫಾರ್ ಜೆ|| ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 21ನೇ ಏಪ್ರಿಲ್ 1884.

ಇದರಿಂದ ತಿಳಿಸಲ್ಪಡುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಹಿಡುವಳೀಯಲ್ಲಿಲ್ಲದ ಕಂದಾಯ ತರಾಯಿಸಲ್ಪಟ್ಟ ಮತ್ತು ಕಂದಾಯ ತರಾಯಿಸಲ್ಪಡದ ತವಾಂ ಜರ್ಮಿ ಜಮೀನುಗಳು, ಗ್ರಾವು ಬೇಲೀಗಳು, ಅಮರಾಯಿ ವ ಅಮರಾಯಿ ಬೇಲೀಗಳು, ಇವುಗಳು ಅಜಗಿರುವ ಡಿಸ್ಟ್ರಿಕ್ಟು ಜಂಗ್ಲೀಗಳ ಪಸಾರೀ ಹುಟ್ಟುವಳೀಯನ್ನು, 1885ನೇ ಮಾರ್ಚೀ 31ರ ವರಿಗೆ ಜಮಾಇಸುವ ಹಕ್ಕುದಾರಿಯು, ತಾಲ್ಲೂಕುವಾರಾಗಿ ಬಹಿರಂಗವಾದ ಹರಾಜು ಮೂಲಕ ಡೆಪ್ಯುಟಿ ಕಮ್ಮಿಷನರ ಆಫೀಸಿನಲ್ಲಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ಟು ಪ್ರೊಬೇಷನರಿಂದ, 1884ನೇ ಜೂ 5ನೇ ಮರ್ತುಂ ಮಧ್ಯಾನ್ಹ ವಿಕ್ರಯಿಸಲ್ಪಡುವದು.

ತಾಲ್ಲೂಕು.	ಹುಟ್ಟುವಳೀಯ ತಪಸೀಲ್.
ಮೈಸೂರು ಹೆಗ್ಗಡದೇವನಕೋಟೆ ಹುಣಸೂರು ಗುಂಡ್ಲುಪೇಟೆ ನಂಜನಗೂಡು ಚಾಮರಾಜನಗರ ತಿರುಮಕೋಡ್ಲು ನರಸೀಪುರ ಮಂಡ್ಯ ಶ್ರೀರಂಗಪಟ್ಟಣ ಯಡತೋರೆ	1 ಅಳಲೇಕಾಯಿ, 2 ತಾರೇಕಾಯಿ, 3 ಸೀಗೇಕಾಯಿ, 4 ಅಂಟುವಾಳದ ಕಾಯಿ, 5 ದಿಂಡಗದ ಬಂಕೆ, 6 ಕಾಡು ಅರಿಸಿನ, 7 ಜೇನುಮೇಣ, ವ ಜೇನುತುಪ್ಪ, 8 ಅರಗು, 9 ಕಪಿಲೇರಂಗು, 10 ಪಚ್ಚಲಕ್ಕೆ, 11 ಪತಂಗ, 12 ಮಡ್ಡಿ, 13 ಚಕ್ಕದಬೀಜ, 14 ಚೆಗಚಿಕೆ ಬೀಜ, 15 ಹೊಂಗೇಬೀಜ, 16 ಗೇರುಬೀಜ, 17 ಹಾಲು ಮಡ್ಡಿ, ಆವರಿಕೇ ಬಂಕೆ, 19 ಸಾರಗದ ಕೊಂಬು, 20 ಗುಗ್ಗಳ ವಗೈರೇ.

ಇಜಾರೇದಾರರಿಗೆ, ಹಿಡುವಳೀ ಜರ್ಮಿಗಳಲ್ಲೂ ಸ್ವಂತ ಅಮರಾಯಿಗಳಲ್ಲೂ ಯಿರುವ ಮರಗಳ ಹುಟ್ಟುವಳೀ ವಿಷಯದಲ್ಲಿ ಯಾವ ಹಕ್ಕುದಾರಿಯೂ ಉಂಟಾಗತಕ್ಕದ್ದಲ್ಲವು.

ಚಡ ದರಖಾಸ್ತುದಾರನು, ದರಖಾಸ್ತು ಮೊಬಲಗ್ ಪೈಕೀ ಸೇಕಡಾ 25ರ ಪ್ರಕಾರ ಕೂಡ್ಲೇ ತೇವಣೀ ಯಿಟ್ಟು, ಬಾಕೀ ಮೊಬಲಗನ್ನು ಡಿಸ್ಟ್ರಿಕ್ಟ್ ಯಾ ತಾಲ್ಲೂಕು ಖಜಾನೇಯಲ್ಲಿ ಸವನಾದ ಮೂರು ಕಿಸ್ತುಗಳ ಪ್ರಕಾರ ಸ೯ 1884ನೇ ಇಸವಿ ಅಕ್ಟೋಬರ್ 1ನೇ ತಾರೀಖಿನಲ್ಲಿಯೂ, 1884ನೇ ನವಂಬರ್ 1ನೇ ವಾರ್ಕುಂನಲ್ಲಿಯೂ, 1884ನೇ ಡಿಕಂಬರ್ 1ನೇ ತಾರೀಖಿನಲ್ಲಿಯೂ, ಪಾವತಿ ಮಾಡತಕ್ಕದ್ದು.

ಯಾವ ಕಿಸ್ತಾಗಲಿ ಬಾಕೀಯಾದಾಗ ಪಾವತೀ ಮಾಡಲಿಕ್ಕೆ ತಪ್ಪಿದರೆ, 1885ನೇ ಇಸವೀ ಮಾರ್ಚೀ 31ರ ವರಿಗೆ ಸಾಲಿನ ಉಳಿದ ಭಾಗಕ್ಕೆ ಜಂಗ್ಲೀ ಹುಟ್ಟುವಳೀಯನ್ನು ಜಮಾಇಸುವ ಹಕ್ಕು ಫಾರೆಸ್ಟ್ ಇಲಾಖೇಯವರಿಂದ ಪುನಃ ಹರಾಜು ಮಾಡಲ್ಪಡುವದು, ಅಥವಾ ಅಮಾನೀಯಲ್ಲಿ ಸದರೀ ಇಲಾಖೇಯವರಿಂದ ರೂಢಿಸಲ್ಪಡತಕ್ಕದ್ದು, ಹಣ ಕೊಡಲಿಕ್ಕೆ ತಪ್ಪಿದವನು ಅದರ ದೆಸೆಯಿಂದ ಉಂಟಾಗುವ ಯಾವ ನುಕ್ಸಾನಿಗಾಗಲಿ ಜವಾಬ್ದಾರನಾಗಿ ಮಾಡಲ್ಪಡತಕ್ಕದ್ದು.

ಫಾರೆಸ್ಟ್ ಪ್ರೊಬೇಷನರವರು, ದರಖಾಸ್ತು ಮಾಡಲಿಕ್ಕೆ ಖಾಯಿಷ್ ಮಾಡತಕ್ಕವರಿಗೆ ಬೇಕಾದ ಯಾವ ಸಂಗತಿಯನ್ನಾಗಲಿ, ಹರಾಜು ತಾರೀಖಿಗೆ ಮುಂದೆ ಅವರ ಆಫೀಸಿನಲ್ಲಿ ಖುದ್ ಖಾಯಿಷ್ ಮಾಡಿಕೊಂಡರೆ ತಿಳಿಸತಕ್ಕದ್ದು.

ಅಬ್ದುಲ್‌ಖಾದರ್ ಕೆ. ಬಿ,
ಡೆಪ್ಯುಟಿ ಕಮ್ಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ತಾರೀಖು 21ನೇ ಏಪ್ರೆಲ್ 1384ನೇ ಇಸವಿ.

ನಗರದಲ್ಲಿ ಯಿರುವ ನೀಲಕೆಂಠೇಶ್ವರ ದೇವಸ್ಥಾನ 1, ಸೊರಬ ತಾಲ್ಲೂಕು ಚಂದ್ರಗುತ್ತಿ ರೇಣಕಾಮ್ಮನವರ ದೇವಸ್ಥಾನ 1, ಈ 2 ದೇವಸ್ಥಾನಗಳ ಬಾಬತು ಭಂಗಾರ ಬೆಳ್ಳಿ, ವಸ್ತ್ರೇ ಬಾಬತು ನಗಗಳು, ಕತ್ತಾಳಿ, ತಾಂಬ್ರ, ಕಂಚು, ಖಬ್ಬಿಣ ಇವುಗಳ ಬಾಬತು ಪಾತ್ರೆ ಸಾಮಾನುಗಳು ಜವಳಿ ಬಟ್ಟೆಗಳು ಯಿವಗಳನ್ನೆಲ್ಲಾ ಸ೯ ಮಜಕೂರ್ ಮೇ ತಾರೀಖು 27ನೇ ಮಂಗಳವಾರ ಹಗಲು 12 ಘಂಟೆ ಸಮಯದಲ್ಲಿ ಶಿವಮೊಗ್ಗೆಯಲ್ಲಿ ಡಿಸ್ಟ್ರಿಕ್ಟ್ ಟ್ರೆಜರೀ ಆಫೀಸಿನಲ್ಲಿ ಪೋಟಾ ಪೋಟೀಯಿಂದ ಹರಾಜು ಹಾಕಿಸುತ್ತಾದ ಪ್ರಯುಕ್ತ, ಚಡ ದರಖಾಸ್ತಿನಿಂದ ಮೊಬಲಗು ಕೂಡ್ಲೇ ಹಾಜರ್ ಮಾಡಿ ಮಾಲ್ ಪಡಿಯುವದಕ್ಕೆ ಇಷ್ಟ ಉಳ್ಳಂಥಾ ಸಮಸ್ತ ಜನರೂ ಸದರೀ ಸಮಯಕ್ಕೆ ಡಿಸ್ಟ್ರಿಕ್ಟ್ ಆಫೀಸ್ ಬಳಿ ಹಾಜರ್ ಯಿರಬೇಕು.

ಆಖೈರ್ ದರಖಾಸ್ತುದಾರರು ಆ ಬಾಬತು ಮೊಬಲಗು ಹಾಜರ್ ಮಾಡುವದಕ್ಕೆ ತಪ್ಪಿದರೆ ಅಂಥಾ ಮಾಲ್‌ಗಳನ್ನು ಪುನಹ ಹರಾಜು ಮಾಡಿಸಿ ಕಮ್ಮಿ ಆಗುವ ಮೊಬಲಗು ಮತು ದರಖಾಸ್ತುದಾರನಿಂದ ವಸೂಲ್ ಮಾಡುವದರಲ್ಲಿ ಬರುತ್ತೆ.

ಪಿ. ಪಂಚನಾಥರಾವ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೆ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 4—8—0; ಎಂಟು ಔನ್ಸ್‌ನುಳ್ಳ ಡಬ್ಬಿಗೆ ರೂ. 8—8—0; ಬಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡೀ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಗಿಸ ಬಹುದು; ನಾಲ್ಕು ಔನ್ಸ್‌ನುಳ್ಳ ಡಬ್ಬಿ ಬಂದಕ್ಕೆ ರೂ. 5—8—0, ಎಂಟು ಔನ್ಸ್‌ನುಳ್ಳ ಡಬ್ಬಿಗೆ ರೂ. 10—8—0, ಬಂದು ಪೌಂಡ್‌ನುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ನ 8 ಔನ್ಸ್ ತಗರದ ಡಬ್ಬಿಗೆ ಎಂಟಆಣೆ ಟಪ್ಪಾಲ್ ಹಾಸಲೂ, ಬಂದು ಪೌಂಡ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

Mysore Government Press, Bangalore.—1884.